Date :21.02.2026

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಎನ್.ಡಿ.ಎಂ. ವಕೀಲರಿಂದ –**

ನಾನು ಎಲ್.ಎ.ಸಿ. 98/2023 ರಲ್ಲಿ ಅರ್ಜಿದಾರನಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಅರ್ಜಿಯಲ್ಲಿ ಕಾಣಿಸಿದ ಜಮೀನಿನ ಬಗ್ಗೆ ಇರುವ ಒಂದು ಪಹಣಿ ಪ್ರತಿ ಹಾಗೂ 1 ನೇ ಎದುರುದಾರರು ನನಗೆ ಕಳುಹಿಸಿದ ಅವಾರ್ಡ ನೋಟೀಸಿನ ನಕಲು ದೃಢೀಕೃತ ಪ್ರತಿ, ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–14 ಮತ್ತು 15 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – ಎದುರುದಾರ 1 ಮತ್ತು 2 ರವರ ಪರ ಶ್ರೀ ಜಿ.ಎಸ್.ಎ. ವಕೀಲರಿಂದ –**

ವಕೀಲರ ಕೋರಿಕೆಯ ಮೇರೆಗೆ ಕಾಲಾವಕಾಶ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ

Date :18.10.2025

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಪಾಟೀ ಸವಾಲು – ಎದುರುದಾರರ ಪರ ಶ್ರೀ ಜಿ.ಎಸ್.ಎ. ವಕೀಲರಿಂದ –**

ಅರ್ಜಿಯಲ್ಲಿ ಕಾಣಿಸಿದ ನನ್ನ ಮಾಲೀಕತ್ವದ ಕೆರೆಹೊಸಹಳ್ಳಿ ಗ್ರಾಮದ ಸರ್ವೆ ನಂ. 59/3 ಆಸ್ತಿಯಲ್ಲಿ ಎದುರುದಾರರು 5 ಗುಂಟೆ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಸದರಿ ಜಮೀನು ಖುಷ್ಕಿ ಜಮೀನು ಇರುತ್ತದೆ. ಸದರಿ ಸ್ವಾಧೀನ ಪಡಿಸಿಕೊಂಡ ವಿಸ್ತೀರ್ಣದ ಆಸ್ತಿಯಲ್ಲಿ 6 ತೆಂಗಿನ ಮರ, 1 ಕೊಳವೆ ಬಾವಿ ಮತ್ತು 90 ಮೀ ಪೈಪ್ ಲೈನ್ ಇತ್ತು ಎಂದರೆ ಸರಿ. ಸದರಿ ಸ್ವಾಧೀನ ಪಡಿಸಿಕೊಂಡ ಆಸ್ತಿ ಮತ್ತು ಕೊಳವೆ ಬಾವಿ ಹಾಗೂ ಪೈಪ್ ಲೈನ್ ಗೆ ಪರಿಹಾರವೆಂದು ಎದುರುದಾರರು ನನಗೆ ರೂ. 4,97,579/– ಹಣ ಪಾವತಿಸಿರುವರು ಎಂದರೆ ಸರಿ. ಸದರಿ ಮೇಲೆ ಹೇಳಿದಂತೆ ಎದುರುದಾರರು ಪರಿಹಾರವೆಂದು ಹಣ ನಿರ್ಧರಿಸುವಾಗ ಅವರು ಮರಗಳಿಗೆ ಸಂಬಂಧಿಸಿದಂತೆ ತೋಟಗಾರಿಕೆ ಇಲಾಖೆಯಿಂದ ವರದಿ ಪಡೆದು ಮತ್ತು ಕೊಳವೆ ಬಾವಿ ಹಾಗೂ ಪೈಪ್ ಲೈನ್ ಬಗ್ಗೆ ಜಿಲ್ಲಾ ಪಂಚಾಯಿತಿಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಮತ್ತು ವಿಶ್ವೇಶ್ವರಯ್ಯ ಜಲನಿಗಮದ ಅಭಿಯಂತರರಿಂದ ವರದಿ ಪಡೆದು ನಂತರ ಮೇಲೆ ಹೇಳಿದ ಹಣವನ್ನು ನನಗೆ ಪರಿಹಾರವೆಂದು ನೀಡಿದ್ದು, ಅದು ಸೂಕ್ತ ಮತ್ತು ಕಾನೂನು ಬದ್ಧವಾಗಿ ಇರುವುದು ಎಂದರೆ ಸರಿಯಲ್ಲ.

2) ಎದುರುದಾರರು ನನ್ನ ಮಾಲೀಕತ್ವದ ಮೇಲೆ ಹೇಳಿದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಬಾಬ್ತು ಪ್ರಾಥಮಿಕ ನೋಟಿಫಿಕೇಶನ್ ನ್ನು ದಿಃ 14.11.2019 ರಂದು ಪತ್ರಿಕೆಯಲ್ಲಿ ಪ್ರಕಟ ಮಾಡಿಸಿರುವರು ಎಂದರೆ ಸರಿ. ಸದರಿ ನೋಟಿಫಿಕೇಶನ್ ಹೊರಡಿಸಿದಾಗ, ಆ ದಿನಾಂಕದಿಂದ 3 ವರ್ಷಗಳ ಹಿಂದಿನ ಅವಧಿಯಲ್ಲಿ ಕರೇಹೊಸಹಳ್ಳಿ ಗ್ರಾಮದ ಆಸ್ತಿಗಳಿಗೆ ಸಂಬಂಧಿಸಿದಂತೆ ಆದ ವ್ಯವಹಾರದ ದಾಖಲೆಗಳನ್ನು ಎದುರುದಾರರು ಉಪನೊಂದಣಾಧಿಕಾರಿಗಳ ಕಛೇರಿಯಿಂದ ತೆಗೆದುಕೊಂಡು, ಅವುಗಳನ್ನು ಸರ್ಕಾರದವರು ಆಸ್ತಿಗಳ ಮೌಲ್ಯದ ಬಗ್ಗೆ ಹೊರಡಿಸಿದ ಮಾರ್ಗಸೂಚಿಯೊಂದಿಗೆ ಪರಿಶೀಲಿಸಿ, ಅವರೆಡರಲ್ಲಿ ಹೆಚ್ಚಿನ ಮೊತ್ತ ಯಾವುದು ಇರುವುದೋ ಅದನ್ನು ಪರಿಗಣಿಸಿ ನಂತರ ಪರಿಹಾರದ ಮೊತ್ತ ನಿರ್ಧರಿಸಿ, ನಮಗೆ ಎದುರುದಾರರು ಹೆಚ್ಚಿನ ಪರಿಹಾರವನ್ನು ಈಗಾಗಲೇ ಕೊಟ್ಟಿರುವರು ಎಂದರೆ ಸರಿಯಲ್ಲ. ಸದರಿ ಪರಿಹಾರದ ಹಣದಲ್ಲಿ ಆರ್.ಎಫ್.ಸಿ.ಟಿ.ಎಲ್.ಆರ್.ಆರ್. ಕಾಯ್ದೆ –13 ರಲ್ಲಿ ಉಲ್ಲೇಖಿಸಿದಂತೆ ಮಾನದಂಡಗಳಂತೆ ಪರಿಹಾರದ ಹಣವನ್ನು ಪರಿಗಣಿಸಿ ಅದರಲ್ಲಿ ಕೂಡಿಸಿರುವರು ಎಂದರೆ ಸರಿಯಲ್ಲ.

3) ನನ್ನ ಮಾಲೀಕತ್ವದ ಜಮೀನನ್ನು ಎದುರುದಾರರು ಸ್ವಾಧೀನ ಪಡಿಸಿಕೊಂಡ ಬಾಬ್ತು ಅವರು ನನಗೆ ಕಾನೂನು ಬದ್ದವಾಗಿ ಸೂಕ್ತ ಪರಿಹಾರವನ್ನು ನೀಡರುವರು ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೋರಿದಂತೆ ಹೆಚ್ಚಿನ ಪರಿಹಾರವನ್ನು ಕೊಡಲು ಎದುರುದಾರರು ಬಾಧ್ಯರೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ಸೂಕ್ತ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-6 ರಿಂದ 20 ಎಂದು ಗುರುತಿಸಿದ ದಾಖಲೆಗಳಿಗೂ ಮತ್ತು ಈ ಕೇಸಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-6 ರಿಂದ 17 ಎಂದು ಗುರುತಿಸಿದ ದಾಖಲೆಗಳು ಎದುರುದಾರರು ನಮ್ಮ ಮಾಲೀಕತ್ವದ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಬಾಬ್ತು ಪ್ರಾಥಮಿಕ ನೋಟೀಸ್ ಹೊರಡಿಸಿದ ನಂತರದ ದಿನಾಂಕದ ದಾಖಲೆಗಳು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲಾ . ನಿಪಿ-8 ಮತ್ತು 10 ಎಂದು ಗುರುತಿಸಿದ ದಾಖಲೆಗಳಲ್ಲಿ ಕಾಣಿಸಿದ ಷೆಡ್ಯೂಲ್ ಸ್ವತ್ತನ್ನು ನೋಡಲಾಗಿ, ಆ ಸ್ವತ್ತು ಕೃಷಿ ಜಮೀನಿಗೆ ಸಂಬಂಧ ಪಟ್ಟಂತೆ ಇರದೇ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಅದೇ ರೀತಿ ಆ ದಾಖಲೆಯಲ್ಲಿ ಕಾಣಿಸಿದ ಸ್ವತ್ತಿನ ವಿಸ್ತೀರ್ಣ ಕ್ರಮವಾಗಿ 7 ಮತ್ತು 5 ಗುಂಟೆ ಇರುವುದು ಕಂಡು ಬರುವುದೆಂದರೆ ಸರಿ. ನಿಪಿ-13 ಮತ್ತು 14 ಎಂದು ಗುರುತಿಸಿದ ದಾಖಲೆಗಳು ಸಿಂಗೇನಹಳ್ಳಿ ಗ್ರಾಮದ ಆಸ್ತಿಯ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಸದರಿ ಸಿಂಗೇನಹಳ್ಳಿ ಗ್ರಾಮವು ಮತ್ತು ನಮ್ಮ ಗ್ರಾಮವು ಅಕ್ಕಪಕ್ಕದಲ್ಲಿರುವುದಾಗಿ ಹೇಳುತ್ತಾರೆ. ನಿಪಿ-18 ಮತ್ತು 19 ಎಂದು ಗುರುತಿಸಿದ ದಾಖಲೆಗಳು ಅದರಲ್ಲಿ ಕಾಣುವ ಇಲಾಖೆಯವರು ನನ್ನ ಹೆಸರಿಗೆ ನೇರವಾಗಿ ಕೊಟ್ಟಿರುವ ದಾಖಲೆಗಳು ಇರದೇ ಸಾರ್ವಜನಿಕವಾಗಿ ನೀಡಿರುವ ದಾಖಲೆಗಳು ಇರುವವು ಎಂದರೆ ಸರಿ.

4) ನನ್ನ ಮಾಲೀಕತ್ವದ ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ನಾನೇನು ಹೊಳಲ್ಕೆರೆ ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರಿಲ್ಲ ಎಂದರೆ ಸರಿಯಲ್ಲ. ಸದರಿ ನಾನು ಬೆಳೆದ ಬೆಳೆಗಳನ್ನು ಹೊಳಲ್ಕೆರೆ ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರಿದ ಬಗ್ಗೆ ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಕಿಲ್ಲವೆಂದರೆ ಸರಿ. ನನ್ನ ಮಾಲೀಕತ್ವದ ಜಮೀನನ್ನು ಎದುರುದಾರರು ಸ್ವಾಧೀನ ಪಡಿಸಿಕೊಂಡ ಬಾಬ್ತು ಈಗಾಗಲೇ ಕಾನೂನು ಬದ್ದವಾಗಿ ನನಗೆ ಸೂಕ್ತ ಪರಿಹಾರವನ್ನು ಪಾವತಿಸಿದ್ದು, ಆದರೂ ಕೂಡ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶ ಇಟ್ಟುಕೊಂಡು ನಾನು ದಾಖಲೆಗಳನ್ನು ಸೃಷ್ಟಿಸಿ ತಂದು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುವೆನೆಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

1 *ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿತ್ರದುರ್ಗ.*